# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## -:ವಾರ್ಡ್-37ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

**ದಿನಾಂಕ: 17.07.2021 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ.37 ಯಶವಂತಪುರ ವಾರ್ಡ್‌ನ, ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.37ರ ವಾರ್ಡ್ ಕಛೇರಿ, ಮಾಡೆಲ್ ಕಾಲೋನಿ, 2ನೇ ಅಡ್ಡರಸ್ತೆಯ ಕಟ್ಟಡದಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡವಳಿಗಳು**

**ಸಭೆಗೆ ಹಾಜರಿದ್ದ ಮಾನ್ಯ ಸದಸ್ಯರು:-**

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಹುದ್ದೆ | ಪದನಾಮ | ಹಾಜರಾತಿ |
|---|---|---|---|---|
| 1 | ಶ್ರೀ ಎನ್. ಜಿ. ಉಮೇಶ್ | ಸ.ಕಾ.ನಿ.ಅ., | ಅಧ್ಯಕ್ಷರು/ ವಾರ್ಡ್ ನೋಡಲ್ ಅಧಿಕಾರಿ | ಹಾಜರಿದ್ದರು |
| 2 | ಎನ್. ಜಿ. ಉಮೇಶ್ | ಸಹಾಯಕ ಅಭಿಯಂತರರು | ಸದಸ್ಯರು | ಹಾಜರಿದ್ದರು |
| 3 | ಡಾ|| ಹರ್ಷಿತ್ | ಕೋವಿಡ್ ವೈದ್ಯಾಧಿಕಾರಿಗಳು | ಸದಸ್ಯರು | ಹಾಜರಿದ್ದರು |
| 4 | ಸುಜಾತಾ | ಹಿರಿಯ ಆರೋಗ್ಯ ಪರಿವೀಕ್ಷಕರು | ಸದಸ್ಯರು | ಹಾಜರಿದ್ದರು |
| 5 | ಗೋವಿಂದರಾಜು ಕೆ. | ಕಂದಾಯ ವಸೂಲಿಗಾರರು ಸ.ಕಂ.ಅ. (ಯಶವಂತಪುರ) | ಸದಸ್ಯರು | ಹಾಜರಿದ್ದರು |
| 6 | ಚನ್ನೇಶಪ್ಪ | ಸಹಾಯಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್‌ಬಿ | ಸದಸ್ಯರು | ಹಾಜರಿದ್ದರು |
| 7 | ಅನಿಲ್ ಕುಮಾರ್ ಎಂ. | ಸಹಾಯಕ ಅಭಿಯಂತರರು, ಬೆಸ್ಕಾಂ | ಸದಸ್ಯರು | ಹಾಜರಿದ್ದರು |
| 8 | ಸುಜಾತಾ | ಲಿಂಕ್ ವರ್ಕರ್ | ಸದಸ್ಯರು | ಹಾಜರಿದ್ದರು |
| 9 | ಸತ್ಯವತಿ | ಲಿಂಕ್ ವರ್ಕರ್ | ಸದಸ್ಯರು | ಹಾಜರಿದ್ದರು |
| 10 | ಶಿವಪ್ರಕಾಶ್ ಎಂ. | ಬಿ.ಎಲ್.ಓ. ಹೋಂ ಐಸೋಲೇಷನ್ ಟೀಂ | ಸದಸ್ಯರು | ಹಾಜರಿದ್ದರು |
| 11 | ಮುರಳಿ | ಮೇಲ್ವಿಚಾರಕರು | ಸದಸ್ಯರು | ಹಾಜರಿದ್ದರು |
| 12 | ಬಿ. ಜಾನ್ | ಮೇಲ್ವಿಚಾರಕರು | ಸದಸ್ಯರು | ಹಾಜರಿದ್ದರು |

ವಾರ್ಡ್-37ರ ವಾರ್ಡ್ ಸಮಿತಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಕಾರ್ಯದರ್ಶಿಯವರು ಸ್ವಾಗತಿಸಿ ವಾರ್ಡ್ ಸಮಿತಿ ಸಭೆಯ ಮಾರ್ಗಸೂಚಿಗಳನ್ನು ಸಭೆಗೆ ಸ್ಥೂಲವಾಗಿ ವಿವರಿಸಿದರು.

ಮಾನ್ಯ ಅಧ್ಯಕ್ಷರು, ಸಭೆಯ ಸದಸ್ಯರುಗಳನ್ನು ಪರಸ್ಪರ ಪರಿಚಯ ಮಾಡಿಸಿ, ಮಾರ್ಗಸೂಚಿಯಂತೆ, ಈ ಕೆಳಗಿನ ವಿಷಯಗಳನ್ನು ಸಭೆಯ ಮುಂದಿಟ್ಟು ವಾರ್ಡ್ ಸಮಿತಿ ಸಭೆಯು ನಿರ್ವಹಿಸಬೇಕಾದ ಅಂಶಗಳನ್ನು ತಿಳಿಸಿ, ಅನುಸರಿಸಬೇಕಾದ ಕ್ರಮಗಳನ್ನು ಈ ಕೆಳಕಂಡಂತೆ ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

1) ಆರೋಗ್ಯ ಶಿಬಿರವನ್ನು ವಾರ್ಡ್‌ನಲ್ಲಿ ಸ್ಥಾಪಿಸುವ ಬಗ್ಗೆ:-

ವಾರ್ಡ್ ವಿವಿಧ ಭಾಗದಲ್ಲಿ ಸ್ಲಂಗಳು ಇರುವ ಜಾಗವನ್ನು ಗುರುತಿಸಿ, ಅಲ್ಲಿ ಪ್ರಾಥಮಿಕವಾಗಿ ಬೇಕಾಗುವ ಕ್ಯಾನೋಪಿ, ಚೇರ್ಸ್, ಟೇಬಲ್, ನೀರಿನ ವ್ಯವಸ್ಥೆಯನ್ನು ಆರೋಗ್ಯ ಇಲಾಖೆಯವರಿಗೆ ಮಾಡಿಕೊಟ್ಟು, ಶಿಬಿರವನ್ನು ಸ್ಥಾಪಿಸಿ, ನಿಯಮಿತವಾಗಿ ಸಾರ್ವಜನಿಕರ ಆರೋಗ್ಯ ತಪಾಸಣೆಯನ್ನು ಮಾಡಲು ಮಾನ್ಯ ಅಧ್ಯಕ್ಷರು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಿಗೆ ಹಾಗೂ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು.

2) ಕಸದ ಸಮಸ್ಯೆ ಬಗ್ಗೆ:

ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ, ವಾರ್ಡ್ ಪೌರ ಕಾರ್ಮಿಕರ ವೇತನ ಪಾವತಿಯಲ್ಲಿ ವಿಳಂಬವಾಗುತ್ತಿರುವ ಬಗ್ಗೆ ಪ್ರಸ್ತಾಪಿಸಿದ್ದು, ಇದರ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡಿ ಪೌರ ಕಾರ್ಮಿಕರಿಗೆ ಸಮರ್ಪಕವಾಗಿ ವೇತನ ಪಾವತಿ ಮಾಡುವಂತೆ ಸಂಬಂಧಪಟ್ಟ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಘನತ್ಯಾಜ್ಯ) ರವರಿಗೆ ಸೂಚಿಸಲಾಯಿತು.

ಪಿಆರ್ ಸ್ಕೂಲ್ ಹಾಗೂ ಹೊಸದಾಗಿ ನಿರ್ಮಿಸುತ್ತಿರುವ ಇಡಬ್ಲ್ಯೂಎಸ್ ವಸತಿ ಸಮುಚ್ಚಯದ ಸುತ್ತಮುತ್ತ ಇರುವ ಬ್ಲ್ಯಾಕ್‌ಸ್ಪಾಟ್‌ಗಳ ಬಗ್ಗೆ ಮಾರ್ಷಲ್ ದೂರಿದ್ದು, ಇದರ ಬಗ್ಗೆ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಬ್ಲ್ಯಾಕ್‌ಸ್ಪಾಟ್‌ಗಳನ್ನು ಈ ಕೂಡಲೇ ತುರ್ತಾಗಿ ತೆರವುಗೊಳಿಸಲು ಸೂಚಿಸಲಾಯಿತು.

3) ಬಿಡಬ್ಲ್ಯೂಎಸ್‌ಎಸ್‌ಬಿ:-

ಹಿಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಹಾಗೂ ಕೈಗೊಂಡಿರುವ ಕ್ರಮಗಳ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಲಾಯಿತು. ಪ್ರಸ್ತುತ ರಸ್ತೆ ಅಗೆತದ ವಿವರಗಳನ್ನು ಸಲ್ಲಿಸಲು ಹಾಗೂ ದುರಸ್ತಿಯಲ್ಲಿರುವ ಮ್ಯಾನ್‌ಹೋಲ್ ವಿವರಗಳನ್ನು ಸಲ್ಲಿಸಲು ಸಭೆಯಲ್ಲಿ ತಿಳಿಸಿದರು.

4) ಬೆಸ್ಕಾಂ ಇಲಾಖೆ:

ವಾರ್ಡ್ ವ್ಯಾಪ್ತಿಯಲ್ಲಿ ಕೆಲವು ಕಡೆಗಳಲ್ಲಿ ದುರಸ್ತಿಗೊಳಗಾದ ಹಾಗೂ ಅನುಪಯುಕ್ತ ವಿದ್ಯುತ ಕಂಬಗಳನ್ನು ಸಂಬಂಧಪಟ್ಟ ಇಲಾಖೆ ನೌಕರರು ತೆರವುಗೊಳಿಸಿ, ಅದರಲ್ಲಿರುವ ಕಬ್ಬಿಣದ ಭಾಗಗಳನ್ನು ಮಾ ತೆಗೆದು, ಉಳಿದ ಡೆಬ್ರಿಸ್‌ನ್ನು ಅಲ್ಲಿಯೇ ಬಿಟ್ಟು ಹೋಗಿರುತ್ತಾರೆ. ಇದನ್ನು ಸಾರ್ವಜನಿಕರು ಸಭೆಯ ತಿಳಿಸಿರುತ್ತಾರೆ. ಅದರಂತೆ, ಸಂಬಂಧಪಟ್ಟ ಬೆಸ್ಕಾಂ ನೌಕರರಿಗೆ ಹಾಗೂ ಗುತ್ತಿಗೆದಾರರಿಗೆ ಕಬ್ಬಿಣದ ಭಾಗ ಜೊತೆಗೆ ಡೆಬ್ರಿಸ್‌ನ್ನು ಸಹ ಸದರಿ ಸ್ಥಳಗಳಿಂದ ತೆರವುಗೊಳಿಸಬೇಕೆಂದು ಸೂಚಿಸಲಾಗಿರುತ್ತದೆ.

೯) ಕಾಮಗಾರಿ ಇಲಾಖೆ:

ವಾರ್ಡ್‌ನಲ್ಲಿ ಕೆಲವೊಂದು ರಸ್ತೆಗಳಲ್ಲಿ ಸಣ್ಣದಾದ ರಸ್ತೆಗುಂಡಿಗಳು ಕಂಡುಬಂದಿದ್ದು, ಕೂಡಲೇ ಅದನ್ನು ಮುಚ್ಚಲು ಸಂಬಂಧಪಟ್ಟ ವಾರ್ಡ್ ಸಹಾಯಕ ಅಭಿಯಂತರರಿಗೆ ರಸ್ತೆಗುಂಡಿಗಳನ್ನು ಮುಚ್ಚಲು ತುರ್ತಾಗಿ ಕ್ರಮಕೈಗೊಳ್ಳಲು ಸೂಚಿಸಿದರು.

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಅಭಿಯಂತರರು ಹಾಗೂ
ಸದಸ್ಯ ಕಾರ್ಯದರ್ಶಿ
ವಾರ್ಡ್ ಸಂಖ್ಯೆ:37

(ಎಸ್. ಜಿ. [illegible])
ಸಹಾಯಕ ಕಾರ್ಯಪಾಲಕ ಅಭಿಯಂತರರು
ವಾರ್ಡ್ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ:37